ಅ) ಹೌದು

ಆ) ಹೌದು ಆಯುರ್ವೇದ ಔಷಧಾಲಯಗಳ ಉನ್ನತೀಕರಣ - 6 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸುವ ಕಾರ್ಯಕ್ರಮವು ಜಿಲ್ಲಾ ಪಂಚಾಯತ್ ಅಧೀನದಲ್ಲಿ ಬರುತ್ತದೆ. ಭಾರತೀಯ ವೈದ್ಯಪದ್ಧತಿ ನಿರ್ದೇಶಕರು, ಈಗಾಗಲೇ ಈ ವಿಷಯದಲ್ಲಿ ಜಿಲ್ಲಾ ಪರಿಷತ್ತು ಅವರಿಂದ ಸೂಕ್ತ ಪ್ರಸ್ತಾವನೆ ಸಲ್ಲಿಸಲು ಕೋರಿರುತ್ತಾರೆ. ಜಿಲ್ಲಾ ಪರಿಷತ್ತು ಮತ್ತು ಭಾರತೀಯ ವೈದ್ಯ ಪದ್ಧತಿಗಳ ನಿರ್ದೇಶಕರಿಂದ ಪ್ರಸ್ತಾವನೆ ಬಂದ ನಂತರ ಸರ್ಕಾರವು ಮುಂದಿನ ಕ್ರಮ ಕೈಗೊಳ್ಳುವುದು.

ಬೀದರ್ ಜಿಲ್ಲೆಯಲ್ಲಿ ಸಾಕ್ಷರತಾ ಆಂದೋಲನ ಕಾರ್ಯಕ್ರಮದ ಬಗ್ಗೆ

239 - ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ) : ಮಾನ್ಯ ವಯಸ್ಕರ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಸಾಕ್ಷರತಾ ಆಂದೋಲನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆಯೇ? ಹಾಗಿದ್ದಲ್ಲಿ ಎಷ್ಟು ಪ್ರಗತಿಯನ್ನು ಸಾಧಿಸಿದೆ ಮತ್ತು ಎಷ್ಟು ಹಣ ಖರ್ಚಾಗಿದೆ? ಇದಕ್ಕಾಗಿ ಮೀಸಲಿರಿಸಿರುವ ಹಣವೆಷ್ಟು?

ಆ) ಸಾಕ್ಷರತಾ ಆಂದೋಲನ ಕಾರ್ಯಕ್ರಮ ಅಧ್ಯಯನ ನಡೆಸಲು ಸರ್ಕಾರದ ಅಧಿಕಾರಿಗಳು ಚೀನಾ ಪ್ರವಾಸವನ್ನು ಕೈಗೊಂಡಿದ್ದರೆ? ಹಾಗಿದ್ದರೆ ಅವರ ಪೂರ್ಣ ಹೆಸರು ಹಾಗೂ ಅವರ ಪ್ರವಾಸದಿಂದಾಗಿ ಸರ್ಕಾರಕ್ಕೆ ಆದ ವೆಚ್ಚವೆಷ್ಟು? ಮತ್ತು ಇದರಿಂದಾಗಿ ಆದ ಅನುಕೂಲವೇನು ಎಂಬುದರ ಬಗ್ಗೆ ಪೂರ್ಣ ವಿವರಗಳನ್ನು ನೀಡುವುದು?

ಇ) ಬೀದರ್ ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ಪ್ರಗತಿಯ ವಿವರಗಳನ್ನು ನೀಡುವುದು?

ಶ್ರೀ ಎಸ್.ಎಂ. ಯಾಹ್ಯಾ (ವಯಸ್ಕರ ಶಿಕ್ಷಣ ಸಚಿವರ ಪರವಾಗಿ ಉನ್ನತ ಶಿಕ್ಷಣ ಸಚಿವರು) :

ಅ) ಹೌದು. ಸಾಕ್ಷರತಾ ಆಂದೋಲನಾ ಹಮ್ಮಿಕೊಳ್ಳಲಾಗಿದೆ.

ಬೀದರ್ ಜಿಲ್ಲೆಯಲ್ಲಿ ಒಟ್ಟು 2,53,881 ಜನ ಅನಕ್ಷರಸ್ಥರಿದ್ದು ಈಗಾಗಲೇ ಸುಮಾರು 2.00 ಲಕ್ಷ ಜನರು 3 ಫ್ರೈಮರ್‌ಗಳನ್ನು ಮುಗಿಸಿದ್ದು, ಇನ್ನುಳಿದವರು ಕಲಿಕೆಯ ವಿವಿಧ ಹಂತದಲ್ಲಿ ಕಲಿಯುತ್ತಿದ್ದಾರೆ.

ರೂ. 139.92 ಲಕ್ಷಗಳು ದಿ : 31-7-94ರ ವರೆಗೆ ಖರ್ಚಾಗಿರುತ್ತದೆ.

ಬೀದರ್ ಜಿಲ್ಲಾ ಸಾಕ್ಷರತಾ ಆಂದೋಲನ ಕಾರ್ಯಕ್ರಮಕ್ಕೆ ರೂ. 200.00 ಲಕ್ಷ ಎಂದು ನಿಗದಿಪಡಿಸಲಾಗಿದೆ.

ಆ) ಕೇಂದ್ರ ಸರ್ಕಾರದ ಮಾನವಸಂಪನ್ಮೂಲ ಇಲಾಖೆಯ ವತಿಯಿಂದ ವಿಶ್ವಡಿಸಿದ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮದಡಿಯಲ್ಲಿ ಸಾಕ್ಷರತಾ ಕಾರ್ಯಕ್ರಮದಲ್ಲಿ ರಾಜ್ಯಾದ್ಯಂತ ಕೆಲಸ ಮಾಡುತ್ತಿರುವ ಅಧಿಕಾರಿಗಳನ್ನು ಆಯ್ಕೆ ಮಾಡಿ ಭಾರತದಿಂದ 28 ಜುಲೈ 1994 ರಿಂದ ಪ್ರಾರಂಭಿಸಿ 14 ದಿವಸಗಳ ಕಾಲ ಭೇಟಿ ನೀಡಲು ಕಳುಹಿಸಲಾಗಿತ್ತು. ಈ ತಂಡದಲ್ಲಿ ಕರ್ನಾಟಕದ ಶ್ರೀಮತಿ ರತ್ನಪ್ರಭಾ, ಜಿಲ್ಲಾಧಿಕಾರಿ, ಬೀದರ್‌ರವರು ತಂಡದ ಸದಸ್ಯರಾಗಿದ್ದರು.

ಇಂತಹ ಭೇಟಿಗಳಿಂದ ಆಯಾ ದೇಶಗಳಲ್ಲಿ ಸಾಕ್ಷರತಾ ಕಾರ್ಯಕ್ರಮದಲ್ಲಿ ಸಾಧಿಸಿರುವ ಪ್ರಗತಿ ಮತ್ತು ಇಂತಹ ಪ್ರಗತಿ ಸಾಧಿಸಲು ಹಾಕಿಕೊಂಡಂತಹ ಕಾರ್ಯಕ್ರಮಗಳ ಅಧ್ಯಯನದಿಂದ ಅಧಿಕಾರಿಗಳಿಗೆ ತಿಳಿವು ಮತ್ತು ಜ್ಞಾನ ಸಂಪಾದನೆ ಆಗಿ ಅಂತಹ ಪ್ರಯೋಜನಕಾರಿ ಕಾರ್ಯಕ್ರಮಗಳನ್ನು ನಮ್ಮ ದೇಶದರಾಜ್ಯಗಳಲ್ಲೂ ಅನುಸರಿಸಬಹುದಾದ ಯೋಜನೆಗಳನ್ನು ಸಿದ್ಧಪಡಿಸಿಕೊಳ್ಳಲು ಅನುಕೂಲವಾಗುತ್ತದೆ.

ಸಾಂಸ್ಕೃತಿಕ ವಿನಿಮಯ ಪ್ರವಾಸಗಳ ಉದ್ದೇಶವೇ ಇದು. ಚೀನಾ ದೇಶವು ಸಾಕ್ಷರತಾ ಕಾರ್ಯಕ್ರಮದಲ್ಲಿ ಯಶಸ್ಸನ್ನು ಸಾಧಿಸಿರುವುದು ಇಡೀ ವಿಶ್ವಕ್ಕೆ ತಿಳಿದಿರುವ ವಿಷಯ.

ಈ ಪ್ರವಾಸದ ಪೂರ್ಣ ಖರ್ಚನ್ನು ಕೇಂದ್ರ ಸರ್ಕಾರವೇ ಭರಿಸಿದ್ದು ಬೀದರ್‌ನಿಂದ ದೆಹಲಿವರೆವಿಗಿನ ಖರ್ಚನ್ನು ಮಾತ್ರ ರಾಜ್ಯ ಸರ್ಕಾರ ಭರಿಸಿದೆ?

ಇ) ವಿವರಗಳನ್ನು ಲಗತ್ತಿಸಿದೆ.

ಬೀದರ್ ಜಿಲ್ಲೆಯ ಸಾಕ್ಷರತಾ ಆಂದೋಲನದ ತಾಲ್ಲೂಕುವಾರು ವಿವರ

ಕ್ರಮ ಸಂಖ್ಯೆ	ತಾಲ್ಲೂಕುಗಳು	ಒಟ್ಟು ಅನಕ್ಷರಸ್ಥರು				ಪ್ರಾಥಮಿಕ ಹಂತದಲ್ಲಿ ಓದುತ್ತಿರುವವರು				ನೀಡಲಾದ ಪ್ರಮಾಣ ಪತ್ರಗಳು
		ಕನ್ನಡ	ಮರಾಠಿ	ಉರ್ದು	ಒಟ್ಟು	1	2	3	ಒಟ್ಟು	
1	2	3	4	5	6	7	8	9	10	11
1.	ಬೀದರ್	42294	1283	18597	57174	3773	1045	5570	10388	45936
2.	ಹುಮನಾಬಾದ್	39022	1898	10538	51458	4982	1197	3742	9921	40626
3.	ಬಸವಕಲ್ಯಾಣ	30629	13391	7945	51965	3643	2321	6383	12447	38442
4.	ಔರಾದ	22031	20087	3284	45352	4277	308	2164	6749	37697
5.	ಭಾಲ್ಕಿ	25452	18544	3936	47932	3756	565	5556	9877	87356
	ಒಟ್ಟು	159428	55203	39250	253881	20431	5536	23415	49382	200057

ಬೀದರ್ ಜಿಲ್ಲೆಯಲ್ಲಿ ಮಹಿಳಾ ಪಾಲಿಟೆಕ್ನಿಕ್

240 - ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಎಷ್ಟು ಮಹಿಳಾ ತಾಂತ್ರಿಕ ವಿದ್ಯಾಲಯಗಳು ಕಾರ್ಯ ನಿರ್ವಹಿಸುತ್ತಿವೆ? (ತಾಲ್ಲೂಕುವಾರು ವಿವರಗಳನ್ನು ನೀಡುವುದು)

ಆ) ಬೀದರ್ ಜಿಲ್ಲೆಯಲ್ಲಿ ಮಹಿಳಾ ತಾಂತ್ರಿಕ ವಿದ್ಯಾಲಯಗಳನ್ನು ತೆರೆಯುವ ಬಗ್ಗೆ ಶಿಕ್ಷಣ ಸಚಿವರು ಹಿಂದಿನ ಸಾಲಿನಲ್ಲಿಯೇ ಆಶ್ವಾಸನೆ ನೀಡಿದ್ದು, ಇದುವರೆವಿಗೆ ಪ್ರಾರಂಭಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಿಂದುಳಿದ ಜಿಲ್ಲೆಯಾದ ಬೀದರ್ ಜಿಲ್ಲೆಯಲ್ಲಿ ಮಹಿಳಾ ತಾಂತ್ರಿಕ ವಿದ್ಯಾಲಯಗಳನ್ನು ತೆರೆಯುವ ಬಗ್ಗೆ ಹಿಂದಿನಿಂದಲೂ ನೆನೆಗುದಿಗೆ ಬಿದ್ದಿರುವುದನ್ನು ನಿವಾರಿಸುವ ಬಗ್ಗೆ ಸರ್ಕಾರವು ಸೂಕ್ತ ಕ್ರಮ ಕೈಗೊಳ್ಳುವುದೇ?

ಶ್ರೀ ಎಸ್.ಎಂ. ಯಾಹ್ಯಾ (ಉನ್ನತ ಶಿಕ್ಷಣ ಸಚಿವರು) :

ಅ) ಬೀದರ್ ಜಿಲ್ಲೆಯಲ್ಲಿ ಪ್ರತ್ಯೇಕವಾಗಿ ಮಹಿಳಾ ತಾಂತ್ರಿಕ ವಿದ್ಯಾಲಯಗಳು ಕಾರ್ಯನಿರ್ವಹಿಸುತ್ತಿಲ್ಲ.

ಆ) ಇಲ್ಲ.

ಇ) ಪರಿಶೀಲಿಸಲಾಗುವುದು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೀಗಡಿ ವ್ಯವಸಾಯದ ಅಭಿವೃದ್ಧಿ

241 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) ಮಾನ್ಯ ಮಿನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೀಗಡಿ ಮೀನು ವ್ಯವಸಾಯವನ್ನು ಅಭಿವೃದ್ಧಿಗೊಳಿಸಲು ಕೈಗೊಂಡ ಕ್ರಮಗಳು ಏನು?

ಆ) ಲಾಭದಾಯಕವಾದ ಈ ಉದ್ಯಮವನ್ನು ಅಭಿವೃದ್ಧಿಪಡಿಸಲು ಖಾಸಗಿ ವ್ಯಕ್ತಿಗಳು ಮುಂದು ಬಂದಿರುವರೆ? ಬಂದಿದ್ದಲ್ಲಿ ವಿವರ ನೀಡುವುದು.